

ಆಧುನಿಕ ಜಗತ್ತಿನ ಮಾಯಾಲೋಕ, ಜಾನಪದವಾಗಿರುವ ಸಿನಿಮಾ ಹಲಬಗೆಯಲ್ಲಿ ನೋಡುಗರನ್ನು ಕಾಡುತ್ತ, ಪರವಶಗೊಳಿಸುತ್ತ ಬಂದಿದೆ. ಕಲೆ, ವಿಜ್ಞಾನ ಎಲ್ಲವೂ ಆಗಿರುವ ಸಿನಿಮಾಗಳ ಮಾಂತ್ರಿಕತೆಯನ್ನು ಸಿನಿರಸಿಕರಿಗೆ ಇಲ್ಲಿ ಪರಿಚಯಿಸಲಾಗುತ್ತದೆ. ತಮ್ಮ ಚಿತ್ತವನ್ನು ಸೂರೆಗೊಂಡ, ಮನಸಿನ ಪುಟದಲ್ಲಿ ದಾಖಲಾದ, ಪಟದಂತೆ ಮನದ ನಭದಲ್ಲಿ ಹಾರುತ್ತಿರುವ ಅನನ್ಯ ಸಿನಿಮಾ ಒಂದರ ಬಗ್ಗೆ ಚಿತ್ರಕ ಬರವಣಿಗೆ ಇಲ್ಲಿದೆ.

ಸಿನಿಮಾದ ಸಂಪರ್ಕಕ್ಕೆ ಬಂದ ಈ ಹದಿನೇಳು ವರ್ಷಗಳಲ್ಲಿ, ಒಟ್ಟು 19 ಚಿತ್ರಗಳನ್ನು ತಯಾರಿಸಿದ್ದಾನೆ. ಐದು ಚಿತ್ರಗಳಿಗೆ ತಾನೇ ಚಿತ್ರಕಥೆ ರಚಿಸಿದ್ದಾನೆ. ಒಂದರಲ್ಲಿ ನಟನೆಯನ್ನೂ ಮಾಡಿದ್ದಾನೆ. ಒಂದು ಚಿತ್ರದ ನಿರ್ಮಾಪಕನೂ ಅವನೇ. ಅಂತರರಾಷ್ಟ್ರೀಯ ಚಲನ ಚಿತ್ರೋತ್ಸವಗಳಲ್ಲಿ ಅವನ ಸಿನಿಮಾಗಳಿಗೆ 17 ಶ್ರೇಷ್ಠ ಪ್ರಶಸ್ತಿಗಳು ಸಂದಿವೆ. ಇದೇನೂ ಸಾಮಾನ್ಯ ಸಾಧನೆಯಲ್ಲ. ಮಾಸ್ಕೋ ಫಿಲ್ಮ್ ಇನ್‌ಸ್ಟಿಟ್ಯೂಟ್ ನಲ್ಲಿ ಚಲನಚಿತ್ರ ತಯಾರಿಕೆಯ ಪಾಠ ಕಲಿತು ಪೋಲೆಂಡಿನ ಖ್ಯಾತ ಚಿತ್ರ ನಿರ್ದೇಶಕ ಆಂದ್ರೆ ವಾಜ್ದಾನ ಬಳಿ ತರಬೇತಿ ಪಡೆದು 1998ರಲ್ಲಿ ಮೊದಲ ಚಿತ್ರ 'ಫೋಟೊಗ್ರಾಫ್' ಮಾಡಿದ. 2000ದ 'ಸ್ಕ್ಯಾರ್ ಕ್ರೋವ್', 2010 ರ 'ಫೋರ್ಟೆಸ್ ಆಫ್ ವಾರ್', 2014ರ 'ಟೆಸ್ಟ್' ಅವನಿಗೆ ಬಹಳಷ್ಟು ಮನ್ನಣೆಯನ್ನೂ ಶ್ರೇಷ್ಠ ನಿರ್ದೇಶಕರ ಸಾಲಿನಲ್ಲಿ ಸ್ಥಾನವನ್ನೂ ಗಳಿಸಿ ಕೊಟ್ಟ ಚಿತ್ರಗಳು.

96 ನಿಮಿಷಗಳ ವರ್ಣಚಿತ್ರ 'ಟೆಸ್ಟ್' ಎರಡನೆಯ ಮಹಾಯುದ್ಧ ಅಂತ್ಯವಾಗುವ ಸಮಯದಲ್ಲಿ ರಷ್ಯಾ ಮೊಟ್ಟ ಮೊದಲ ಬಾರಿಗೆ ಜಲಜನಕ ಬಾಂಬ್‌ನ ಸ್ಫೋಟಕ ಪರೀಕ್ಷೆಯನ್ನು ಮಾಡಿತು. ಅದನ್ನು ಹಿನ್ನೆಲೆಯಾಗಿ ಇಟ್ಟು ತೋರಿಸುವ ಈ ಚಿತ್ರ ಒಂದು ಸಾಮಾನ್ಯ ಪ್ರೇಮದ